ಹೇಳಿದರೆ ಅಪ್ಪನ ಮನೆಗೆ ಹೋಗ್ತೀನಿ ಅಂತಾಳೆ, ನಂಗೆ ಸಾಕಾಗಿದೆ ಅಂತಿದ್ದ. ಆಮೇಲೆ ಕ್ಯಾಂಟೀನ್‌ನಲ್ಲಿ ಕೂತ್ಕಂಡು ಮಾತಾಡಣ ಬನ್ನಿ, ನಿಮಗೇನೋ ಹೇಳೋದದೆ ಅಂತಿದ್ದ... ಕೆಲವು ದಿನ ಕಳೆದ ಮೇಲೆ ಹೆಂಡ್ತಿ ಜತೆ ರಸ್ತೆಯಲ್ಲಿ ಮುಖಾಮುಖಿ ಆದ. ಅವಳು ಲಕ್ಷಣವಾಗಿದ್ದಳು, ಮೈಕೈ ತುಂಬಿಕೊಂಡು ಆರೋಗ್ಯವಾಗಿದ್ದಳು. ಇಬ್ಬರೂ ಮಗು ಕೈಹಿಡಕೊಂಡು ಬರ್ತಾ ಇದ್ರು. ಮಗು ಜತೆ ಅವಳು ಇಂಗ್ಲಿಷಲ್ಲಿ ಮಾತಾಡ್ತಾ ಇದ್ಲು. ಆಶ್ಚರ್ಯ ಅಂದರೆ ಅವನು ಅಶ್ವಿನಿಯನ್ನು ನೋಡಿಯೂ ನೋಡದಂತೆ ಹೋಗಿಬಿಟ್ಟ, ಡರ್ಟಿಫೆಲೊ. ಮರುದಿನ ಕಾಲೇಜಲ್ಲಿ ಎದುರಿಗೆ ಕಂಡಾಗ ಗುಡ್ ಮಾರ್ನಿಂಗ್ ಅಂದ. ಅವನೂ ಮುಖವಾಡ ಹಾಕಿಕೊಂಡಿದ್ದನೇ?

***

ಶರತ್ ಇದ್ದಕ್ಕಿದ್ದ ಹಾಗೆ ಎರಡು ದಿನ ರಜೆ ಹಾಕಿದ. ರಜೆ ಮುಗಿಸಿ ಆಫೀಸಿಗೆ ಬಂದ ಕೂಡಲೇ ಚೇಂಬರ್‌ಗೆ ಬರುವಂತೆ ಕರೆದ. ನಿನ್ನೆ ಎರಡೂ ಮೀಟಿಂಗ್‌ಗಳನ್ನು ಚೆನ್ನಾಗಿ ಹ್ಯಾಂಡಲ್ ಮಾಡಿದ್ರಿ ಅಂತ ವೈಸ್ ಪ್ರೆಸಿಡೆಂಟ್ ಹೇಳಿದರು. ಕಾರು ತಗಳ್ಳೋಕೆ ನಿಮಗೆ ಇಂಟೆರೆಸ್ಟ್ ಫ್ರೀ ಲೋನ್ ಕೊಡಿ ಅಂತ ಹೇಳಿದ್ದಾರೆ ಅಂದ. ಚೇಂಬರಿನಿಂದ ಹೊರಡುವಾಗ ನಿನ್ನೆ ನನ್ನ ಡಿವೋರ್ಸ್ ಆಯ್ತು, ಸಂಜೆ, ಅವಳು ತನ್ನ ತಂಗಿ ಜತೆ ಬಂದು ಬಟ್ಟೆಬರೆ ಪ್ಯಾಕ್ ಮಾಡಿಕೊಂಡು ಹೋದಳು. ನಮಗೆ ಮಕ್ಕಳಿದ್ದಿದ್ದರೆ ಡಿವೋರ್ಸ್ ಆಗ್ತಿರಲಿಲ್ಲ ಅಂದ. ಹೋಗೊ ಮೊದಲು ಅವಳ ತಂಗಿ ನನ್ನತ್ರ ಬಂದು ನಂಗಷ್ಟೇ ಕೇಳಿಸುವ ಹಾಗೆ 'ಫೋನ್ ಮಾಡ್ತೀನಿ, ಮಾತಾಡಿ ಭಾವ' ಅಂದಳು ಅಂತ ಹೇಳುವಾಗ ಅವನ ಧ್ವನಿ ಬದಲಾಗಿದ್ದನ್ನು ಗುರುತಿಸಿದಳು. ಮುಖದಲ್ಲಿ ನಾದಿನಿಗೆ ಇಷ್ಟವಾಗಿದ್ದೀನಿ ಅನ್ನೋ ಭಾವವಿತ್ತು. ಡಿವೋರ್ಸ್ ಅಗಿದ್ದಕ್ಕೆ ಅವನಿಗೆ ಬೇಸರ ಆದಂತೆ ಕಾಣಲಿಲ್ಲ.

ದಿನಗಳು ಕಳೆದಂತೆ ಶರತ್ ಬದಲಾಗಿದ್ದಾನೆ ಅನ್ನೋದು ಅಶ್ವಿನಿಯ ಅನುಭವಕ್ಕೆ ಬಂತು. ಅವಳೊಂದಿಗೆ ಮಾತಾಡುವಾಗ ನೇರವಾಗಿ ಮುಖ ನೋಡದೆ ಎತ್ತಲೋ ನೋಡಿಕೊಂಡು ಮಾತಾಡ್ತಿದ್ದ. ಹೆಂಡತಿ ಬಿಟ್ಟುಹೋದ ಮೇಲೆ ನಿಜವಾಗಿಯೂ ಬದಲಾಗಿದ್ದಾನೆ!

ಆಮೇಲೆ ಅದೇನಾಯ್ತೊ ಅವಳಿಗೆ ಮತ್ತೆ ಮತ್ತೆ ನೆನಪಾಗುತ್ತಿದ್ದ. ಗೊತ್ತೇ ಆಗದಂತೆ ಅವಳ ಮನಸ್ಸಿನೊಳಕ್ಕೆ ಅಕ್ರಮ ಪ್ರವೇಶ ಮಾಡಿದ! ಅವನನ್ನು ಅಲ್ಲಿಂದ ಹೊರಕ್ಕೆ ದಬ್ಬಲು ಅವಳಿಗೆ ಸಾಧ್ಯವಾಗಲಿಲ್ಲ. ಯಾವುದೋ ಫೈಲು ಬೇಕಿತ್ತು ಅನ್ನುವ ನೆಪ ಮಾಡಿಕೊಂಡು ಅವನ ಚೇಂಬರ್‌ಗೆ ಹೋಗಿ ಬರತೊಡಗಿದಳು. ಈಗ ಮುಂಬೈಗೆ ಬರ್ತೀಯಾ ಅಂತ ಅವನು ಕರೆಯಬಾರದೇ ಅಂತ ಅನ್ನಿಸಲು ಶುರುವಾಯಿತು.

***

ಟ್ಯಾಕ್ಸಿಯಲ್ಲಿ ಕೂರುವಾಗ 'ಹುಷಾರಾಗಿರು' ಅಂತ ಅಪ್ಪ ಐದಾರು ಸಲ ಹೇಳಿದರು. 'ಒಬ್ಳೇ ಹೋಗ್ತಾ ಇದ್ದೀಯ. ದೊಡ್ಡ ಊರು, ಫ್ಲೈಟ್ ಲ್ಯಾಂಡ್ ಆದ ಕೂಡಲೇ ಮೆಸೇಜ್ ಮಾಡು. ಪ್ರೀಪೇಯ್ಡ್ ಟ್ಯಾಕ್ಸಿ ಮಾಡಿಕೊಂಡು ಹೋಗು. ಹೋಟೆಲ್ ತಲುಪಿದ ಮೇಲೆ ಫೋನ್ ಮಾಡು' ಅಂತ ಎರಡು ಸಲ ಹೇಳಿದ್ದರು. ಅಮ್ಮನ ಕಣ್ಣಲ್ಲಿ ನೀರಿತ್ತು. ಇಬ್ಬರೂ ಪಾಪದವರು ಅನ್ನಿಸಿತು ಅಶ್ವಿನಿಗೆ.

ದಾರಿಯಲ್ಲಿ ಬರುತ್ತಿರುವಾಗ ಅವನ ಫೋನ್ ಬಂತು. 'ಏರ್‌ಪೋರ್ಟ್ ಹೊರಗೆ ನಿಂತು ನಂಗಾಗಿ ಕಾಯಬೇಡಿ. ಗಲ್ಫ್ ಏರ್‌ಸರ್ವೀಸ್ ಕೌಂಟರಿಗೆ ಹೋಗಿ ಮೊದಲು ಲಗೇಜ್ ಡ್ರಾಪ್ ಮಾಡಿ, ಬೋರ್ಡಿಂಗ್ ಪಾಸ್ ತಗೊಳ್ಳಿ. ಬೋರ್ಡಿಂಗ್ ಗೇಟಿನ ಮುಂದಿರೊ ಲಾಂಜ್‌ನಲ್ಲಿ ಕೂತಿರಿ, ನಾನು ಅಲ್ಲಿಗೇ ಬರ್ತೀನಿ. ಮುಂಬೈ ಏರ್‌ಪೋರ್ಟಿಂದ ಆಚೆ ಬರೋವರೆಗೆ ನಾವು ಅಪರಿಚಿತರ ಹಾಗಿರಬೇಕು, ಗೊತ್ತಾಯ್ತು ಅಂತ ಹೇಳಿ ಏನಾದ್ರೂ ಹೇಳೋದಿದ್ರೆ ಮೆಸೇಜ್ ಮಾಡು...' ಅಂದ. ಬಹುವಚನದಲ್ಲಿ ಮಾತು ಶುರು ಮಾಡಿ, ಏಕವಚನದಲ್ಲಿ ಮುಗಿಸಿದ್ದ. ಅದು ಅವಳಿಗೆ ಇಷ್ಟವಾಗಿತ್ತು.

ಬೋರ್ಡಿಂಗ್ ಗೇಟಿನ ಮುಂದೆ ಮುಂಬೈಗೆ ಹೊರಟವರೆಲ್ಲ ಟಿಕೆಟ್ ಹಿಡಿದುಕೊಂಡು ಕ್ಯೂ ನಿಲ್ಲತೊಡಗಿದರು. ಶರತ್ ಪತ್ತೆ ಇಲ್ಲ. ಅವಳಿಗೆ ಚಡಪಡಿಕೆ ಶುರುವಾಯಿತು. ಅವನೇ ವ್ಯವಸ್ಥೆ ಮಾಡಿದ್ದಾನೆ ಅಂದ ಮೇಲೆ ಬಂದೇ ಬರ್ತಾನೆ ಅನ್ನಿಸಿತು. ಅವಳ ಗಮನವೆಲ್ಲ ಅವನು ಬರುವ ದಾರಿ ಕಡೆಗಿತ್ತು. ಬೋರ್ಡಿಂಗ್ ಅನೌನ್ಸ್‌ಮೆಂಟ್